


ಅಧ್ಯಯನ ನಿರತ 'ಜೀವಿ'

ಹೆಸರು. 1943ರಲ್ಲಿಯೇ ಡಿ.ಎಲ್. ನರಸಿಂಹಾಚಾರ್ಯರು ಪದಸಂಗ್ರಹದ ತರಬೇತಿಯನ್ನು ನೀಡಿ ಅವರನ್ನು ಈ ಕ್ಷೇತ್ರಕ್ಕೆ ಕರೆತಂದರು. ಅವರ ಗುರುಗಳಾದ ಎ.ಆರ್. ಕೃಷ್ಣಶಾಸ್ತ್ರಿಗಳು, 'ಇದು ನೀನೇ ಮಾಡಬೇಕಾದ ಕೆಲಸ' ಎಂದು ಸೂಚಿಸಿದರು. ಜಿ.ವಿಯವರು 14 ನಿಘಂಟುಗಳನ್ನು ಸ್ವತಃ ರೂಪಿಸುವುದರ ಜೊತೆಗೆ ನಿಘಂಟು ಶಾಸ್ತ್ರದ ಪರಿಚಯ ನೀಡುವ ಎರಡು ಮುಖ್ಯ ಕೃತಿಗಳನ್ನೂ ರಚಿಸಿದ್ದಾರೆ. 1993ರಲ್ಲಿ ಅವರು 'ಕನ್ನಡ ನಿಘಂಟು ಶಾಸ್ತ್ರ ಪರಿಚಯ' ಕೃತಿ ರಚಿಸುವುದಕ್ಕೆ ಮೊದಲು ಆ ಕ್ಷೇತ್ರದಲ್ಲಿ ಕೃತಿಗಳೇ ಇರಲಿಲ್ಲ. ಅಲ್ಲಿಂದ ಮುಂದೆ ಅದು ಆ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆಲ್ಲರಿಗೂ ಆಚಾರ್ಯ ಕೃತಿಯಾಯಿತು. 'ಕನ್ನಡ ನಿಘಂಟು ಪರಿವಾರ' ನಿಘಂಟು ರಚನೆಯ ಹಿಂದಿನ ತಾತ್ವಿಕತೆಯನ್ನು ವಿವರಿಸುವಂತಹ ಕೃತಿ. ಇಲ್ಲಿನ 19 ಲೇಖನಗಳು ನಿಘಂಟು ರಚನೆಯ ಹಿಂದಿನ ಕುಶಲತೆಯನ್ನು ದಕ್ಷವಾಗಿ ವಿವರಿಸುತ್ತವೆ.

ಜಿ.ವಿಯವರ ಇಂಗ್ಲಿಷ್–ಕನ್ನಡ ನಿಘಂಟು ಬಹು ಜನಪ್ರಿಯ ದ್ವಿಭಾಷಾ ನಿಘಂಟು. ಇದು ಅನುವಾದಕರಿಗೆ ಅತ್ಯುಪಯುಕ್ತ. ಬ್ರೈಲ್ ಲಿಪಿಗೆ ಕೂಡ ಇದು ಅಳವಡಿಸಲ್ಪಟ್ಟಿದ್ದು, ಅಂಧರ ಸುಲಭ ಬಳಕೆಗೆ ಲಭ್ಯ. 1998ರಲ್ಲಿ ಪ್ರಕಟವಾದ ಅವರ 'ಎರವಲು ಪದಕೋಶ' ಇನ್ನೊಂದು ಪ್ರಮುಖ ಸಾಧನೆ. ಇಂಗ್ಲಿಷ್, ಪಾರ್ಸಿ, ಹಿಂದಿ, ಮರಾಠಿ ಮೊದಲಾದ ಭಾಷೆಗಳಿಂದ ಬಂದ ಪದಗಳ ವಿವರಣೆ ಇಲ್ಲಿದೆ. ಅದರ ಅಭ್ಯಾಸಪೂರ್ಣ ಪ್ರಸ್ತಾವನೆಯಲ್ಲಿ ಎರವಲು ಪದದ ಸ್ವರೂಪ, ಜಗತ್ತಿನ ಭಾಷೆಗಳಲ್ಲಿ ಆಗಿರುವ ಬದಲಾವಣೆ ಎಲ್ಲವನ್ನೂ ಜಿ.ವಿ ಸವಿವರವಾಗಿ ಚರ್ಚಿಸಿದ್ದಾರೆ. ಪತ್ರಕರ್ತರ ಬಳಕೆಗೆ ಉಪಯುಕ್ತವಾಗಿರುವ 'ಪತ್ರಿಕಾ ಪದಕೋಶ' ಜಿ.ವಿಯವರ ಇನ್ನೊಂದು ಪ್ರಮುಖ ಸಾಧನೆ. ನಿತ್ಯದ ಉಪಯೋಗಕ್ಕಾಗಿ ಜಿ.ವಿ 'ಕನ್ನಡ–ಕನ್ನಡ ಸಂಕ್ಷಿಪ್ತ ನಿಘಂಟು' ರಚಿಸಿದ್ದಾರೆ. ಅದು ಹಲವರಿಗೆ ಕನ್ನಡ ಬಳಕೆಯ ಕುರಿತು ಮಾರ್ಗದರ್ಶಿ ಕೃತಿ ಎನ್ನಿಸಿಕೊಂಡಿದೆ. 'ಮುದ್ದಣ ಪ್ರಯೋಗ ಕೋಶ' ಎಂಬ ಕವಿ